**<u>ಸಾಕ್ಷಿಯನ್ನು ದಿನಾಂಕಃ 09.02.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ AMK ವಕೀಲರಿಂದ.**

1. ದಾವಾ ಆಸ್ತಿಯು ಮೂಡ್ಲಪಣ್ಣೆ ಗ್ರಾಮಕ್ಕೆ ಸೇರಿದ್ದು, ಸದರಿ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿ ಮೂಲತಃ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ, ಪ್ರತಿವಾದಿಯು ವಾದಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತು. ಪ್ರತಿವಾದಿ ಹೆಸರಿಗೆ ದಾವಾ ಆಸ್ತಿಯು ಕರಾರು ಪತ್ರವಾಗಿದ್ದು, ಅವರು ವಾದಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ ಹೆಸರಿಗೆ ಆದ ಕರಾರು ಪತ್ರವನ್ನು ನಾನು ನೋಡಿರುವುದಿಲ್ಲ. ನಿಪಿ- 5 ನ್ನು ಬರೆದುಕೊಡುವ ಕಾಲಕ್ಕೆ ಪ್ರತಿವಾದಿ ಹೆಸರಿಗೆ ಕರಾರು ಪತ್ರ ಆಗಿರುವ ಬಗ್ಗೆ ನನಗೆ ಗೊತ್ತಿತ್ತು. ಪ್ರತಿವಾದಿಗೆ ಕರಾರು ಪತ್ರದ ಮೂಲಕ ಆಸ್ತಿ ಬಂದಿರುವ ಬಗ್ಗೆ ನಿಪಿ-5 ರಲ್ಲಿ ಬರೆದಿರುತ್ತಾರೆ. ದಾವಾ ಆಸ್ತಿಯು ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ, ನಿಪಿ-5 ರಲ್ಲಿ ಆ ಬಗ್ಗೆ ಬರೆದಿರುತ್ತಾರೋ ಇಲ್ಲವೋ ನಾನು ನೋಡಿರುವುದಿಲ್ಲ.

2. ನಿಪಿ-5 ರಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-5 ರ ದಿನಾಂಕದಂದು ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದೇನೆಂದು ಹೇಳಿರುತ್ತಾರೆ. ದಿಃ 14.10.2009 ರಂದು ಪ್ರತಿವಾದಿಯು ವಾದಿಗೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಬಾಕಿ ಹಣ 2 ಲಕ್ಷ 30 ಸಾವಿರ ರೂಗಳನ್ನು ಪಡೆದುಕೊಂಡು ನೊಂದಾಯಿತ ಕ್ರಯಪತ್ರವನ್ನು ಬರೆದುಕೊಡುವುದಾಗಿ, ಆ ರೀತಿ ಬರೆದುಕೊಡಲು ವಿಫಲರಾದ್ದಲ್ಲಿ ನ್ಯಾಯಾಲಯಕ್ಕೆ ಹೋಗಿ ಕ್ರಯಪತ್ರವನ್ನು ಬರೆಸಿಕೊಳ್ಳುವಂತೆ ನಿಪಿ-5 ರಲ್ಲಿ ಷರತ್ತನ್ನು ಹಾಕಿರುತ್ತಾರೆ. ಪ್ರತಿವಾದಿಯು ಜಮೀನುಗಳನ್ನು ಖರೀದಿ ಮಾಡಿ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದ ಕಾರಣ ದಾವಾ ಆಸ್ತಿಯನ್ನು ಪ್ರತಿವಾದಿ ವಾದಿಗೆ ಮಾರಾಟ ಮಾಡಲು ಕರಾರು ಪತ್ರವನ್ನು

ಬರೆದುಕೊಟ್ಟಿರುತ್ತಾರೆ. ನಿಪಿ-5 ನ್ನು ಬರೆದುಕೊಡುವ ಕಾಲಕ್ಕೆ ದಾವಾ ಆಸ್ತಿಯ ಮೇಲೆ ಪ್ರತಿವಾದಿಗೆ ಹಕ್ಕು ಇದೆ ಎಂಬುದರ ಬಗ್ಗೆ ಅವರೇ ಹೇಳಿರುತ್ತಾರೆ. ನಿಪಿ-5 ರ ದಿನಾಂಕದಂದು ಪ್ರತಿವಾದಿ ಏನು ದಾಖಲೆಗಳನ್ನು ತಂದಿದ್ದರು ಎಂಬುದರ ಬಗ್ಗೆ ನಾನು ನೋಡಿರುವುದಿಲ್ಲ, ನಿಪಿ-5 ಕ್ಕೆ ಅವರೇ ಮಾಹಿತಿಯನ್ನು ಬರೆಸಿರುತ್ತಾರೆ.

3. ನಿಪಿ-5 ನ್ನು ಬರೆದುಕೊಡುವ ಒಂದು ವಾರದ ಮೊದಲೇ ದಾವಾ ಆಸ್ತಿಯನ್ನು ಮಾರಾಟ ಮಾಡುವ ಸಂಬಂಧ ಮಾತುಕತೆ ಆಗಿತ್ತು. ಆ ಸಮಯದಲ್ಲಿ ನಾನು ಹಾಜರಿರಲಿಲ್ಲ. ನಿಪಿ-5 ರ ಛಾಪಾ ಕಾಗದವನ್ನು ಪ್ರತಿವಾದಿ ತಂದಿರುತ್ತಾರೆ. ಛಾಪಾ ಕಾಗದವನ್ನು ಪ್ರತಿವಾದಿ ಎಲ್ಲಿಂದ ತಂದಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ-5 ರ ಛಾಪಾ ಕಾಗದ ಬೆಲೆ 100 ರೂ ರ ಛಾಪಾ ಕಾಗದ ಆಗಿರುತ್ತದೆ. ನಿಪಿ- 5 ನ್ನು ಬಿಕ್ಲಂದಾರರಾದ ಪ್ರಭಯ್ಯರವರ ಕಛೇರಿಯಲ್ಲಿ ಬರೆದಿರುತ್ತಾರೆ. ನಿಪಿ-5 ರಲ್ಲಿನ ಅಂಶಗಳನ್ನು ಬೆರಳಚ್ಚು ಮಾಡಿರುತ್ತಾರೆ. ವಾದಿಯು ಮುಂಗಡ 1 ಲಕ್ಷ ರೂ ಹಣವನ್ನು ಬಿಕ್ಲಂದಾರರಾದ ಪ್ರಭಯ್ಯರವರ ಕಛೇರಿಯಲ್ಲಿ ನೀಡಿರುತ್ತಾರೆ. ನಮ್ಮ ಸಮಕ್ಷಮದಲ್ಲಿ ನಿಪಿ-5 ನ್ನು ಬೆರಳಚ್ಚು ಮಾಡಿರುತ್ತಾರೆ. ಆ ಸಮಯದಲ್ಲಿ ನಾನು, ನರಸಿಂಹಮೂರ್ತಿ, ರಂಗನಾಥ್, ಶ್ರೀನಾಥ್, ಪ್ರಭಯ್ಯ, ಪ್ರತಿವಾದಿ ಇದ್ದೆವು. ನರಸಿಂಹಯ್ಯಮೂರ್ತಿ ಮತ್ತು ರಂಗನಾಥ್ ರವರು ಆಂಗ್ಲ ಭಾಷೆಯಲ್ಲಿ ಮತ್ತು ನಾನು ಹಾಗೂ ಶ್ರೀನಾಥ್ ರವರು ಕನ್ನಡ ಭಾಷ್ಷೆಯಲ್ಲಿ ನಿಪಿ-5 ಕ್ಕೆ ಸಹಿಗಳನ್ನು ಮಾಡಿರುತ್ತೇವೆ. ನಿಪಿ-5 ರ ದಿನಾಂಕದಂದು ನೊಂದಾಯಿತ ಕ್ರಯಪತ್ರವನ್ನು ಏಕೆ ಬರೆದಕೊಡಲು ಆಗಲಿಲ್ಲ ಎಂಬುದರ ಬಗ್ಗೆ ಸದರಿ ದಾಖಲೆಯಲ್ಲಿ ಬರೆದಿರುವುದಿಲ್ಲ. ನಿಪಿ-5 ನ್ನು ನೊಂದಾವಣಿ ಮಾಡಿಕೊಳ್ಳದೇ ಇರುವ ವಿಚಾರ ಮೊದಲೇ ಮಾತನಾಡಿಕೊಂಡಿರಬಹುದು ಆ ಬಗ್ಗೆ ನನಗೆ ಗೊತ್ತಿಲ್ಲ. ಬಾಕಿ 2 ಲಕ್ಷ 30 ಸಾವಿರ ರೂಗಳನ್ನು ನೊಂದಾಯಿತ ಕ್ರಯ ಪತ್ರ ಬರೆದುಕೊಡುವ ದಿವಸ ಪಾವತಿ ಮಾಡುವಂತೆ ಮಾತುಕತೆ ಆಗಿತ್ತು. ವಾದಿಯು 500 ರೂ ಮುಖ ಬೆಲೆಯ ಎರಡು ಕಟ್ಟುಗಳ ಒಟ್ಟು

1 ಲಕ್ಷ ರೂ ಹಣವನ್ನು ಪ್ರತಿವಾದಿಗೆ ನೀಡಿರುತ್ತಾರೆ.  ಪ್ರತಿವಾದಿಯು ವಾದಿಗೆ ನಿಪಿ-5 ನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.  ಪ್ರತಿವಾದಿಯು ವಾದಿಗೆ 1 ಲಕ್ಷ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.  ನಿಪಿ-5 ರಲ್ಲಿರುವ ಕೆ ಪಿ ರಮೇಶ್ ರವರ ಸಹಿ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ.  ಪ್ರತಿವಾದಿಯೇ ಕರಾರು ಪತ್ರಕ್ಕೆ ಸಹಿ ಮಾಡಲು ನನ್ನನ್ನು ಮತ್ತು  ಇತರೆ ಸಾಕ್ಷಿದಾರರನ್ನು ಕರೆದುಕೊಂಡು ಹೋಗಿರುತ್ತಾರೆ. ವಾದಿಯು ನನ್ನ ಸ್ನೇಹಿತ.   ನಾನು ಮತ್ತು ಇತರೆ ಸಾಕ್ಷ್ಯ ದಾರರು ಒಟ್ಟಾಗಿ ಹೋಗಿರುತ್ತೇವೆ.  ಸಾಕ್ಷಿದಾರರಾದ ನರಸಿಂಹಮೂರ್ತಿ ಮತ್ತು ರಂಗನಾಥ್ ರವರು ಕೊರಟಗೆರೆ ವಾಸಿಗಳಾಗಿರುತ್ತಾರೆ.  ಸಾಕ್ಷಿದಾರರಾದ ಶ್ರೀನಾಥ್ ರವರು ಕಾಮರಾಜನಹಳ್ಳಿ ವಾಸಿ.  ವಾದಿ ಪ್ರತಿವಾದಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಹಾಗೂ ಅವರು ವಾದಿಗೆ ಯಾವುದೇ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.  ನಿಪಿ-5 ನ್ನು ಬರೆದುಕೊಡುವ 6 ತಿಂಗಳ ಮೊದಲಿನಿಂದ ಪ್ರತಿವಾದಿಯ ಪರಿಚಯ ನನಗೆ ಇತ್ತು.   ದಾವಾ ಆಸ್ತಿಯ ಪ್ರತಿವಾದಿಗೆ ಸೇರಿದ ಆಸ್ತಿ ಅಲ್ಲ ಎಂದರೆ ಸರಿಯಲ್ಲ.  ನಾನು ಇತರೆ ಸಾಕ್ಷಿದಾರರು ಹಾಗೂ ವಾದಿ ಸೇರಿಕೊಂಡು ನಿಪಿ-5 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**